OCTOBER 19, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಇನ್‌ಸ್ಪೈರ್ ಮಾನಕ್**; ಜಪಾನ್‌ನಲ್ಲಿ ಆಯೋಜಿತ, ಅಂತಾರಾಷ್ಟ್ರೀಯ ವಿಜ್ಞಾನ ವಸ್ತುಪ್ರದರ್ಶನಕ್ಕೆ, ರಾಜ್ಯದ 9 ವಿದ್ಯಾರ್ಥಿಗಳು, ಆಯ್ಕೆ.
- **ಕನ್ಯಾಪೂಜೆ ಮೂಲಕ**, ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ ಪ್ರತಿಪಾದಿಸಿದ, ರಾಜ್ಯಪಾಲರಾದ ಡಾಕ್ಟರ್ ಸುಧಾ ಯಾದವ.
- **ಗರ್ಭಕಂಠದ ಕ್ಯಾನ್ಸರ್**; ಎಚ್.ಪಿ.ವಿ. ಲಸಿಕೆ ನೀಡಿಕೆ ಅಭಿಯಾನ, ಡಿಸೆಂಬರ್ 31ರ ವರೆಗೆ ವಿಸ್ತರಣೆ.
- **ನೈಋತ್ಯ ರೇಲ್ವೆ ಹುಬ್ಬಳ್ಳಿ ವಿಭಾಗದಿಂದ**, 'ಸ್ವಚ್ಛತೆಯೇ ಸೇವೆ ಪಾಕ್ಷಿಕ ಅಭಿಯಾನ', ಯಶಸ್ವಿ ಸಂಪನ್ನ.

<><><>

**ಈಗ ವಾರ್ತೆಗಳ ವಿವರ**

<><><>

**ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ** ಹಾಗೂ ನ್ಯಾ  ʼನಲ್ ಇನೋವೇಶನ್ ಫೌಂಡೇಶನ್ – ಇಂಡಿಯಾ, ಹೊಸ ದಿಲ್ಲಿಯ, ಭಾರತ ಮಂಟಪಂನಲ್ಲಿ, ಕಳೆದ 12 ರಿಂದ 14ನೇ ತಾರೀಖಿನ ವರೆಗೆ, ಮೂರು ದಿನಗಳ ಕಾಲ ಆಯೋಜಿಸಿದ್ದ, ರಾಷ್ಟ್ರ ಮಟ್ಟದ ವಿಜ್ಞಾನ ವಸ್ತುಪ್ರದರ್ಶನದಲ್ಲಿ, ರಾಜ್ಯದ 9 ವಿದ್ಯಾರ್ಥಿಗಳು, ಜಪಾನ್‌ನಲ್ಲಿ ನಡೆಯಲಿರುವ, ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ರಾಷ್ಟ್ರ ಮಟ್ಟದ ವಿಜ್ಞಾನ ವಸ್ತುಪ್ರದರ್ಶನದಲ್ಲಿ, ರಾಜ್ಯದ 22 ಜಿಲ್ಲೆಗಳಿಂದ, ಒಟ್ಟು 102 ವಿದ್ಯಾರ್ಥಿಗಳು ಭಾಗವಹಿಸಿ, ತಮ್ಮ ವೈಜ್ಞಾನಿಕ ಚಿಂತನೆ, ಸೃಜನಶೀಲತೆ ಮತ್ತು ನಾವೀನ್ಯತೆಯನ್ನು ಪ್ರತಿಬಿಂಬಿಸುವ, ಮಾದರಿಗಳನ್ನು ಪ್ರದರ್ಶಿಸಿದರು.

<><><>

ಈ ಕುರಿತು, ಒಂದು ವರದಿ..

<><><>

*ವಿದ್ಯಾರ್ಥಿಯ ಆವಿ  ಕ್ಕಾರದಲ್ಲಿ, ಹೊಸತನ, ಸಾಮಾಜಿಕ ಉಪಯುಕ್ತತೆ, ಪರಿಸರ ಸ್ನೇಹಿ ಗುಣ, ಬಳಕೆದಾರ ಸ್ನೇಹಿತ್ವ, ಪ್ರಸ್ತುತ ಲಭ್ಯ ಪರಿಹಾರಗಳಿಗಿಂತ, ಹೆಚ್ಚಿನ ಪ್ರಯೋಜನ ಹಾಗೂ ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳುವ ಸಾಧ್ಯತೆಯ ಆಧಾರದ ಮೇಲೆ,*

***9 ವಿಶೇಷ ಪ್ರಾಯೋಗಿಕ ಮಾದರಿಗಳನ್ನು, ಅಂತಾರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆ ಮಾಡಲಾಗಿದೆ. ಶಾಲಾ ಮಕ್ಕಳ ಕಲ್ಪನೆಯನ್ನು, ಕೇವಲ ಮಾದರಿಯಾಗಿ ಉಳಿಸದೇ, ಸಮಾಜದ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲ, ನವೀನ ಆವಿ ಕಾರವಾಗಿ ರೂಪಿಸುವ ವೇದಿಕೆಯೇ – INSPIRE–MANAK - Million Minds Augmenting National Aspiration and Knowledge. ಪ್ರದರ್ಶನಗೊಂಡ ಸಂಶೋಧನೆಗಳಲ್ಲಿ, ಹೆಚ್ಚು ಕೃಷಿಗೆ ಸಂಬಂಧಿಸಿದ ಮಾದರಿಗಳಾಗಿದ್ದು ವಿಶೇ . ಹಿತಮಿತ ಶ್ರಮ, ಕಡಿಮೆ ವೆಚ್ಚ, ಸಾಮಾನ್ಯ ಹಿಡುವಳಿಯ ಸಣ್ಣ ರೈತರೂ ತಮ್ಮ ಹೊಲ, ಗದ್ದೆ ಮತ್ತು ತೋಟಗಳಲ್ಲಿ ಬಳಸಬಹುದಾದ, ಬಹೋಪಯೋಗಿ ಕೃಷಿ ಉಪಕರಣಗಳ ಮಾದರಿಗಳು, ನಿರ್ಣಾಯಕರ ಮತ್ತು ವೀಕ್ಷಕರ ಮೆಚ್ಚುಗೆ ಗಳಿಸಿದವು.***

<><><>

ಕರ್ನಾಟಕವನ್ನು, ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸಿದ, ವಿದ್ಯಾರ್ಥಿಗಳ ತಂಡದ ಬೆಂಗಾವಲು ಶಿಕ್ಷಕಿಯಾಗಿದ್ದ, ಹಾವೇರಿ ಜಿಲ್ಲೆ, ಶಿಕ್ಷಣ ಮತ್ತು ತರಬೇತಿ ಸಂಸ್ಥೆ – ಡಯಟ್ ಶಿಕ್ಷಕಿ, ಐ.ಎಸ್. ಗಿರಿಜಾ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

**ವಿವೇಕ (69) + ಶಿಕ್ಷಕಿ ಐ.ಎಸ್. ಗಿರಿಜಾ ಧ್ವನಿ (45) ಸೆಕೆಂದುಗಳು**

<><><>

**ಕೇಂದ್ರ ಸಚಿವ ಪ್ರಲ್ಹಾದ ಜೋಶಿ,** ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ನಿರೀಕ್ಷಣಾ ಮಂದಿರದಲ್ಲಿ, ಕಬ್ಬು ಬೆಳೆಗಾರರ ಮುಖಂಡರೊಂದಿಗೆ, ತಡರಾತ್ರಿ ಮಾತುಕತೆ ನಡೆಸಿದರು. ಬೆಳಗಾವಿ ಸಂಸದ ಜಗದೀಶ ಶೆಟ್ಟರ, ಬೆಳಗಾವಿ ಹಾಗೂ ಧಾರವಾಡ ಜಿಲ್ಲಾಧಿಕಾರಿಗಳು, ಹಿರಿಯ ಪೊಲೀಸ್ ಅಧಿಕಾರಿಗಳು, ಸಭೆಯಲ್ಲಿ ಪಾಲ್ಗೊಂಡಿದ್ದರು. ಸೌಹಾರ್ದಯುತವಾಗಿ ಸಭೆ ನಡೆದಿದ್ದು, ಸಕಾರಾತ್ಮಕ ವಾತಾವರಣ ನಿರ್ಮಾಣಗೊಂಡಿದೆ. ಪರಿಹಾರ ಕಂಡುಕೊಳ್ಳಲು, ಸಹಕಾರ ನೀಡುವುದಾಗಿ, ರೈತ ಮುಖಂಡರು ತಿಳಿಸಿದ್ದಾಗಿ, ಸಚಿವ ಜೋಶಿ ಸಭೆ ಬಳಿಕ, ಮಾಹಿತಿ ನೀಡಿದರು. ತಾತ್ಕಾಲಿಕವಾಗಿ, ರೈತರು ಪ್ರತಿಭಟನೆ ಹಿಂಪಡೆದಿದ್ದಾರೆ.

<><><>

**ಬೆಂಗಳೂರಿನ ನಾಗಮ್ಮನಗರ ಕೊಳೆಗೇರಿಯ,** ಬಡ ಹಾಗೂ ನಿರ್ಗತಿಕ ಬಾಲಕಿಯರನ್ನು, ಲೋಕಭವನಕ್ಕೆ ಆಹ್ವಾನಿಸಿ, ನವರಾತ್ರಿ ಹಬ್ಬದ ಹಿನ್ನೆಲೆ, ರಾಜ್ಯಪಾಲರಾದ ಡಾಕ್ಟರ್ ಸುಧಾ ಯಾದವ, ಕನ್ಯಾಪೂಜೆ ನೆರವೇರಿಸಿದರು. ಬಾಲಕಿಯರ ಹಣೆಗೆ ತಿಲಕವಿಟ್ಟು, ಭಕ್ತಿಯಿಂದ ಪೂಜಾ ವಿಧಿ ನೆರವೇರಿಸಿದರು. ಮಕ್ಕಳೊಂದಿಗೆ ಸಂವಾದ ನಡೆಸಿ, ಶಾಲಾ ಬ್ಯಾಗ್, ಪುಸ್ತಕಗಳು ಹಾಗೂ ಲೇಖನ ಸಾಮಗ್ರಿಗಳನ್ನು ನೀಡಿ, ಆಶೀರ್ವದಿಸಿದರು. ರಾಜ್ಯಪಾಲರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಬೆಂಬಲ ಮತ್ತು ಅವರ ಉಜ್ವಲ ಭವಿ ಯಕ್ಕೆ ಪೂರಕ ವಾತಾವರಣ ಕಲ್ಪಿಸುವ, ಮಹತ್ವವನ್ನು ಕನ್ಯಾಪೂಜೆ ಮೂಲಕ, ಪ್ರತಿಪಾದಿಸಿದರು. ರಾಜ್ಯ ಕೊಳೆಗೇರಿ ಪ್ರದೇಶ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

<><><>

**14 ರಿಂದ 15 ವರ್ಷದೊಳಗಿನ,** ಬಾಲಕಿಯರಿಗೆ, ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು, Human Papilloma Virus ಎಚ್.ಪಿ.ವಿ. ಲಸಿಕೆ ನೀಡಿಕೆ ಅಭಿಯಾನ, ಡಿಸೆಂಬರ್ 31ರ ವರೆಗೆ ವಿಸ್ತರಣೆಯಾಗಿದೆ. ಇದು ವರೆಗೆ ರಾಜ್ಯದಲ್ಲಿ ಒಟ್ಟು 4 ಲಕ್ಷ 34 ಸಾವಿರದ 382 ಬಾಲಕಿಯರಿಗೆ, ಎಚ್.ಪಿ.ವಿ. ಲಸಿಕೆ ನೀಡಲಾಗಿದ್ದು, ಶೇಕಡ 85 ರ ಟ್ಟು ಗುರಿ ಸಾಧನೆಯಾಗಿದೆ. ಎಚ್.ಪಿ.ವಿ. ಲಸಿಕೆ ಪಡೆಯದಿರುವ, ಅರ್ಹ 14 ರಿಂದ 15 ವ ರ್ಷದೊಳಗಿನ ಹೆಣ್ಣು ಮಕ್ಕಳು, ಲಸಿಕೆ ಪಡೆಯಬಹುದು ಎಂದು, ಬೆಂಗಳೂರು ದಕ್ಷಿಣ ಜಿಲ್ಲೆ, ಸಂತಾನೋತ್ಪತ್ತಿ ಆರೋಗ್ಯಾಧಿಕಾರಿಗಳು ಕೋರಿದ್ದಾರೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ನೈಋತ್ಯ ರೇಲ್ವೆ ಹುಬ್ಬಳ್ಳಿ ವಿಭಾಗ,** 'ಸ್ವಚ್ಛತೆಯೇ ಸೇವೆ ಅಭಿಯಾನ'ದಡಿ, ಕಳೆದ 14 ದಿನಗಳ ಕಾಲ ಆಯೋಜಿಸಿದ್ದ, ರೈಲು ಬಳಕೆದಾರರ ಜಾಗೃತಿ, ಸ್ವಚ್ಛತಾ ಪಾಕ್ಷಿಕ ನಿನ್ನೆ ಸಂಪನ್ನಗೊಂಡಿತು. ನೈಋತ್ಯ ರೇಲ್ವೆ ವ್ಯಾಪ್ತಿಯ, 397 ಸ್ಥಳಗಳ ಪೈಕಿ, 354 ಸ್ಥಳಗಳಲ್ಲಿ ಸೌಂದರ್ಯೀಕರಣ ಅಭಿಯಾನ ನಡೆಯಿತು. 'ನೋ ರೆಡ್ & ಯೆಲ್ಲೋ ಸ್ಪಾಟ್' ಉಪಕ್ರಮದಡಿಯಲ್ಲಿ, 191 ಶುಚಿಗೊಳಿಸುವ ಅಭಿಯಾನಗಳು, 57 ಕಡೆಗಳಲ್ಲಿ, ಉಗುಳಬೇಡಿ ಜಾಗೃತಿ ಭಿತ್ತಿ ಬರೆಹ ಪ್ರದರ್ಶಿಸಲಾಯಿತು. ಆನ್–ಬೋರ್ಡ್ ಹೌಸ್‌ಕೀಪಿಂಗ್ ಸರ್ವೀಸಸ್ ಸಾವಿರದ 823 ಸಿಬ್ಬಂದಿಗೆ, ತ್ಯಾಜ್ಯ ವಿಂಗಡಣೆ ಮತ್ತು ವೈಜ್ಞಾನಿಕ ತ್ಯಾಜ್ಯ ನಿರ್ವಹಣೆ ತರಬೇತಿ ನೀಡಲಾಗಿದೆ. 14 ಶಾಲೆಗಳ, 447 ವಿದ್ಯಾರ್ಥಿಗಳಿಗೆ, ತ್ಯಾಜ್ಯ ನೀರು ಸಂಸ್ಕರಣೆ, ಪುನರ್ ಬಳಕೆ ಮಾಹಿತಿ, 21 ರೈಲು ನಿಲ್ದಾಣಗಳಲ್ಲಿ, 25 ಬೀದಿ ನಾಟಕಗಳು ಪ್ರದರ್ಶನಗೊಂಡವು.

<><><>

**ಕೇಂದ್ರ ಲೋಕಸೇವಾ ಆಯೋಗ ನಡೆಸುವ,** ರಾಷ್ಟ್ರೀಯ ರಕ್ಷಣಾ ಅಕಾಡೆಮಿ – ಎನ್.ಡಿ.ಎ. ಲಿಖಿತ ಪರೀಕ್ಷೆಯಲ್ಲಿ, ಬೀದರ ಜಿಲ್ಲೆ, ಭಾಲ್ಕಿಯ ಚನ್ನಬಸವೇಶ್ವರ ಗುರುಕುಲದ, ಪದವಿಪೂರ್ವ ವಿಜ್ಞಾನ ಕಾಲೇಜಿನ, ಐವರು ವಿದ್ಯಾರ್ಥಿಗಳು, ಲಿಖಿತ ಪರೀಕ್ಷೆಯಲ್ಲಿ, ಉತ್ತೀರ್ಣರಾಗಿದ್ದಾರೆ. ನ್ಯಾಶನಲ್ ಡಿಫೆನ್ಸ್ ಅಕಾಡೆಮಿಯಲ್ಲಿ, ಕಲಿಕೆ ಮತ್ತು ನೇಮಕಾತಿ ಆಕಾಂಕ್ಷಿ, ಕಲಬುರಗಿ ಜಿಲ್ಲೆ, ಸೇಡಂ ತಾಲೂಕು, ಕಲಕಂಬಾ ಗ್ರಾಮದ, ನರೇಂದ್ರ ರೆಡ್ಡಿ ಸತ್ಯನಾರಾಯಣ ರೆಡ್ಡಿ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ನರೇಂದ್ರ ರೆಡ್ಡಿ ಸತ್ಯನಾರಾಯಣ ರೆಡ್ಡಿ ಧ್ವನಿ (45) ಸೆಕೆಂದುಗಳು**

<><><>

**ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ** ಸಚಿವಾಲಯ, ಮೈಸೂರು ದಸರಾ ಮಹೋತ್ಸವದ ಅಂಗವಾಗಿ, ಶಿಲ್ಪ ಸಮಾಗಮ ಮೇಳದಲ್ಲಿ, ದೇಶದ ವಿವಿಧ ರಾಜ್ಯಗಳ, ಕರಕುಶಲ ಹಾಗೂ ಕೈಮಗ್ಗದ ಉತ್ಪನ್ನಗಳು ಪ್ರದರ್ಶಿನಿ ಆಯೋಜಿಸಿದೆ. ಸಚಿವಾಲಯದ ಕಾರ್ಯದರ್ಶಿ, ಸುಧಾನ್ಸ್ ಪಂಥ ಶಿಲ್ಪಾ ಸಮಾಗಮ ಮೇಳಕ್ಕೆ ಭೇಟಿ ನೀಡಿ, ಮಾತನಾಡಿ, 'ವೋಕಲ್ ಫಾರ್ ಲೋಕಲ್' ಪ್ರಕಲ್ಪದಡಿ, ಪರಿಶಿಷ್ಟ ಜಾತಿ ಹಾಗೂ ಪಂಗಡದ ಕುಶಲ ಕರ್ಮಿಗಳು ರೂಪಿಸಿದ, ವಸ್ತುಗಳ ಪ್ರದರ್ಶನಕ್ಕೆ ಒತ್ತು ನೀಡಲಾಗಿದೆ, ಎಂದರು.

<><><>

**ಕಂಬಳ ಶ್ರಮಿಕರ ಕ್ರೀಡೆ,** ಕರಾವಳಿ ಭಾಗದ ಜನರ ಸಾಂಸ್ಕೃತಿಕ ಹಬ್ಬ. ರೈತರ ಬದುಕು ಕಾಪಾಡುವಂತೆ, 800 ವ ರ್ಗಗಳ ಹಿಂದೆ, ಕದ್ರಿ ಮಂಜುನಾಥ ಸ್ವಾಮಿ ಸೇವೆಗಾಗಿ, ಜಾನಪದ ಕ್ರೀಡೆ ಕಂಬಳ ಪ್ರಾರಂಭವಾಯಿತು, ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ,

ತಿಳಿಸಿದ್ದಾರೆ. ಮೈಸೂರು ದಸರಾ ಅಂಗವಾಗಿ, ಕಂಬಳ ಉದ್ಘಾಟಿಸಿ, ಅವರು ಮಾತನಾಡಿದರು. ಭತ್ತದ ಗದ್ದೆ, ಮಳೆ, ಮಣ್ಣು, ಕೋಣ, ರೈತರ ಬದುಕನ್ನು ನಾವು ಕಂಬಳದಲ್ಲಿ ನೋಡುತ್ತಿದ್ದೇವೆ. ಕೃಷಿ ಶ್ರಮಿಕರನ್ನು ಗೌರವಿಸಲು, ನಮ್ಮ ಕ್ರೀಡೆ ಹಾಗೂ ಕಲೆಗೆ ಉತ್ತೇಜನ ನೀಡಲು, ಈ ಪ್ರಯತ್ನ ಕೈಗೊಳ್ಳಲಾಗಿದೆ, ಎಂದರು.

<><><>

**ಶರನ್ನವರಾತ್ರಿಯ, ದುರ್ಗಾಷ್ಟಮಿ ಇಂದು.** ಮಹಾಗೌರಿ ಪೂಜೆ. ನಾಡಿನ ಶಕ್ತಿ ದೇವತೆಗಳ ಪೀಠಗಳಲ್ಲಿ, ಶ್ವೇತ ವಸ್ತ್ರಧಾರಿಣಿ ದೇವಿ ಅಲಂಕಾರ, ಮನಮೋಹಕವಾಗಿದೆ. ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ, ಇಂದು ಉಪವಾಸ ವ್ರತಾಚರಣೆ. ದುರ್ಗಾ ದೇವಿ ಮನುಕುಲದ ತಾಯಿಯಾಗಿದ್ದು, ಬ್ರಹ್ಮಾಂಡದ ಸೃಷ್ಟಿ, ಸಂರಕ್ಷಣೆ ಮತ್ತು ವಿನಾಶದ ಹಿಂದಿನ ಶಕ್ತಿ ಎಂದು ನಂಬಲಾಗಿದೆ. ಬ್ರಹ್ಮಾಂಡದ ಸರ್ವೋಚ್ಚ ಶಕ್ತಿಯಾಗಿ ದೇವಿ ದುರ್ಗೆಯನ್ನು ಪೂಜಿಸಲಾಗುತ್ತಿದೆ. ನಾಳೆ ಮಹಾನವಮಿ ಹಾಗೂ ಖಂಡೆ ಪೂಜೆ. ನಾಡಿದ್ದು ದಸರಾ ಹಾಗೂ ವಿಜಯ ದಶಮಿ ಸಂಭ್ರಮ.

<><><>

**ನಾಡಹಬ್ಬ, ಮೈಸೂರು ದಸರಾ** ಮಹೋತ್ಸವದ ಅಂಗವಾಗಿ, ಭಾರತೀಯ ವಾಯುಪಡೆಯ, 'ಸೂರ್ಯಕಿರಣ ಏರೋಬ್ಯಾಟಿಕ್ಸ್' ತಂಡದ, ಸಾಹಸಮಯ ವಾಯು ಪ್ರದರ್ಶನ, ಇಂದೂ ಸಹ ನಡೆಯಲಿದೆ.

<><><>

**ಕಿತ್ತೂರು ಉತ್ಸವದ ಅಂಗವಾಗಿ,** ಕಿತ್ತೂರ ರಾಣಿ ಚನ್ನಮ್ಮ, ವಿಜಯ ಜ್ಯೋತಿ ರಥ ಧಾರವಾಡಕ್ಕೆ ಆಗಮಿಸಿದ ಹಿನ್ನೆಲೆ, ಜಿಲ್ಲಾಧಿಕಾರಿ ಆರ್. ಸ್ನೇಹಲ್ ಸ್ವಾಗತಿಸಿ, ಪೂಜೆ ಸಲ್ಲಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಇನ್‌ಸ್ಪೈರ್ ಮಾನಕ್**; ಜಪಾನ್‌ನಲ್ಲಿ ಆಯೋಜಿತ, ಅಂತಾರಾಷ್ಟ್ರೀಯ ವಿಜ್ಞಾನ ವಸ್ತುಪ್ರದರ್ಶನಕ್ಕೆ, ರಾಜ್ಯದ 9 ವಿದ್ಯಾರ್ಥಿಗಳು, ಆಯ್ಕೆ.
- **ಕನ್ಯಾಪೂಜೆ ಮೂಲಕ,** ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ ಪ್ರತಿಪಾದಿಸಿದ, ರಾಜ್ಯಪಾಲರಾದ ಡಾಕ್ಟರ್ ಸುಧಾ ಯಾದವ.
- **ಗರ್ಭಕಂಠದ ಕ್ಯಾನ್ಸರ್**; ಎಚ್.ಪಿ.ವಿ. ಲಸಿಕೆ ನೀಡಿಕೆ ಅಭಿಯಾನ, ಡಿಸೆಂಬರ್ 31ರ ವರೆಗೆ ವಿಸ್ತರಣೆ.
- **ನೈಋತ್ಯ ರೇಲ್ವೆ ಹುಬ್ಬಳ್ಳಿ ವಿಭಾಗದಿಂದ,** 'ಸ್ವಚ್ಛತೆಯೇ ಸೇವೆ ಪಾಕ್ಷಿಕ ಅಭಿಯಾನ', ಯಶಸ್ವಿ ಸಂಪನ್ನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>